ಓಎಸ್ ನಂಃ101/2012 PW ಃ 1 ಹೆಸರುಃ ಲಕ್ಷ್ಮಿ

ಸಾಕ್ಷಿಯನ್ನು ದಿಃ18.08.2016 ರಂದು ಕರೆಯಿಸಿ ಪ್ರಮಾಣವಚನ ಬೋಧಿಸಲಾಗಿದೆ.

ಪಾಟೀ ಸವಾಲು ಶ್ರೀ.ಜಿ.ಆರ್. ವಕೀಲರಿಂದಃ (5ನೇ ಪ್ರತಿವಾದಿ)

ನನಗೆ ಮದುವೆ ಆಗಿ ಸುಮಾರು 25 ವರ್ಷ ಆಗಿದೆ. ನಾನು ಮದುವೆ ಆದ ಸಮಯದಿಂದಲೂ ಸಹ ಮೈಸೂರಿನಲ್ಲಿಯೇ ವಾಸ ಮಾಡುತ್ತಿದ್ದೇನೆ. ನನ್ನ ಮದುವೆಯ ಸಮಯದಲ್ಲಿ ನಮ್ಮ ಯಾಜಮನರಿಗೆ ವರೋಪಚಾರ ಮಾಡಿ ಮದುವೆ ಮಾಡಿಕೊಟ್ಟರು ಎಂದರೆ ಸರಿ. ಮದುವೆ ಸಮಯದಲ್ಲಿ ಓಡವೆ, ವಸ್ತ್ರ ನೀಡಿದ್ದಾರೆ ಆದ್ದರಿಂದ ನಿಮಗೆ ದಾವ ಆಸ್ತಿಯಲ್ಲಿ ಯಾವುದೇ ಭಾಗ ಇಲ್ಲ ಎಂದರೆ ಸರಿಯಲ್ಲ. ದಿಃ23-08-1986 ರಂದು ಪ್ರತಿವಾದಿ-1, 3 ಮತ್ತು 5ನೇ ಪ್ರತಿವಾದಿರವರು ದಾವ ಆಸ್ತಿಗಳನ್ನು ಪಂಚಾಯ್ತಿ ಪಾಲುಪಟ್ಟಿಯ ಪ್ರಕಾರ ವಿಭಾಗ ಮಾಡಿಕೊಂಡಿದ್ದಾರೆಂದರೆ ಸರಿಯಲ್ಲ. ಒಟ್ಟು ಕುಟುಂಬದ ಆಸ್ತಿಯಲ್ಲಿ ದಾವ ಸ್ವತ್ತು 7 ಮತ್ತು 11 ಮಾತ್ರ ವಿಭಾಗಕ್ಕೆ ಲಭ್ಯವಿದೆ ಉಳಿದ ಎಲ್ಲಾ ದಾವ ಸ್ವತ್ತುಗಳು ಪಂಚಾಯ್ತಿ ಪಾಲುಪಟ್ಟಿ ಪ್ರಕಾರ ವಿಭಾಗ ಆಗಿವೆ ಎಂದರೆ ಸರಿಯಲ್ಲ. ದಾವ ಆಸ್ತಿ 7 ಮತ್ತು 11 ನ್ನು 1 ಮತ್ತು 5ನೇ ಪ್ರತಿವಾದಿಯವರು ಜುಬಾನೆ ವಿಭಾಗ ಮಾಡಿಕೊಂಡಿದ್ದಾರೆಂದರೆ ಸರಿಯಲ್ಲ. ದಾವ ಆಸ್ತಿಗಳು ಒಟ್ಟು ಕುಟುಂಬದ ಆಸ್ತಿಗಳು ಅಲ್ಲ ಎಂದರೆ ಸರಿಯಲ್ಲ. ಆದ್ದರಿಂದ ನನಗೆ ಭಾಗ ಕೇಳಲು ಹಕ್ಕಿಲ್ಲ ಎಂದರೆ ಸರಿಯಲ್ಲ. ದಿಃ23-08-1986 ರ ಪಂಚಾಯ್ತಿ ಪಾಲುಪಟ್ಟಿ ಪ್ರಕಾರ ಖಾತೆ ವರ್ಗಾವಣೆ ಆಗಿದೆ ಎಂದರೆ ಸರಿಯಲ್ಲ.

ನನ್ನ ಉಕ್ತಲೇಖನದ ಮೇರೆಗೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.

ಓ ಹೇ ಕೇ ಸ ಇದೆ ಎಂ ಒ

ಎರಡನೇ ಹೆಚ್ಚುವರಿ ಸಿ.ಜೆ ಮತ್ತು ಪ್ರದನ್ಯಾದಂ,
ನಂಜನಗೂಡು